# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop


## ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

### ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ-5/2013-14, ದಿನಾಂಕ:28.06.2013 ನೀಡಲಾಗಿತ್ತು. ಆ ನಂತರದಲ್ಲಿ ಸದರಿ ಸುತ್ತೋಲೆಗಳನ್ನು ಮಾರ್ಪಾಡು ಮಾಡಿ, ದಿನಾಂಕ 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ನಿರ್ಣಯಿಸಿ, ದಿನಾಂಕ 01 ಜನವರಿ 2021ರಿಂದ ಅನ್ವಯವಾಗುವಂತೆ ಪರಿಷ್ಕೃತ ಮಾನದಂಡಗಳನ್ನು ನೀಡಲಾಗಿತ್ತು.

ಕಳೆದ ಐದು ವರ್ಷಗಳಲ್ಲಿ ಸೌಹಾರ್ದ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಪ್ರಸ್ತುತ ಇರುವ ಶಾಖಾ ಅನುಮತಿ ಕುರಿತ ಮಾನದಂಡಗಳ ಕುರಿತು ಅನೇಕ ಸಲಹೆಗಳು ಬಂದಿವೆ. ಮಾನದಂಡಗಳ ಅನುಷ್ಠಾನದಲ್ಲಿಯೂ ಸಹ ಅನೇಕ ಪ್ರಾಯೋಗಿಕ ಸಮಸ್ಯೆಗಳು ಎದುರಾಗಿವೆ. ಈ ಹಿನ್ನೆಲೆಯಲ್ಲಿ, ಮಾನದಂಡಗಳನ್ನು ಇನ್ನೊಮ್ಮೆ ಪರಿಷ್ಕರಿಸಿ, ನೂತನ ಮಾನದಂಡಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

### ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ

ಕ.ಸೌ.ಸ. ಅಧಿನಿಯಮ, 1997ರ ಕಲಂ 23ಎ ಮತ್ತು 53 (7) (ಎ) ಹಾಗೂ (ಹೆಚ್) ಅಡಿ

ಸಂಖ್ಯೆ : ಸಂಸ/ಆಸು-01/2026-27 ದಿನಾಂಕ: 01.04.2026

### ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು

1. ಹಿಂದಿನ 3 ಆರ್ಥಿಕ ವರ್ಷದಲ್ಲಿ ಕ್ರೋಢೀಕೃತ ನಷ್ಟ ತೆಗೆದು ಲಾಭ ಗಳಿಸಿರಬೇಕು.
2. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.15ನ್ನು ಮೀರತಕ್ಕದ್ದಲ್ಲ.
3. ಕಲಂ 35ರಡಿಯ ವಿಚಾರಣೆ ಚಾಲ್ತಿಯಲ್ಲಿರುವಾಗ ಶಾಖಾನುಮತಿ ನೀಡಬಾರದು. ಆದಾಗ್ಯೂ ವಿಚಾರಣೆಯ ಅಂಶಗಳ ಆಧಾರದ ಮೇಲೆ ಶಾಖಾನುಮತಿ ಕುರಿತು ನಿರ್ಣಯಿಸಲು ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.
4. ಶಾಸನಬದ್ಧ ಕರ್ತವ್ಯಗಳನ್ನು ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ವಂತಿಗೆ/ ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
5. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.

1. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ರೂ.20 ಲಕ್ಷ
2. ಉಳಿದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.15 ಲಕ್ಷ
3. ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ
4. ಮೇಲಿನವುಗಳನ್ನು ಹೊರತುಪಡಿಸಿ ಇತರೆ ಕೇಂದ್ರಗಳಿಗೆ ರೂ.5 ಲಕ್ಷ

- ಸಹಕಾರಿಯ ವ್ಯವಹಾರರಹಿತ ಆಡಳಿತ ಕಛೇರಿ ಹೊರತುಪಡಿಸಿ, ಈಗಾಗಲೇ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

6. ಮೊದಲ ಎರಡು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.
7. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 18 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ 3(4)(ಸಿ) ಗಳನ್ನು ಪಾಲಿಸಿರತಕ್ಕದ್ದು.
8. ಸಂಯುಕ್ತ ಸಹಕಾರಿಯು ಹೊರಡಿಸಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು. ದ್ರವ್ಯಾಸ್ತಿ ನಿರ್ವಹಣೆಯನ್ನು ಕಲಂ 18ರ ಪ್ರಕಾರ ಹೂಡಿಕೆ ಮಾಡಿದಲ್ಲಿ ಮಾತ್ರ ಪರಿಗಣಿಸತಕ್ಕದ್ದು.
9. ಸಹಕಾರಿಯು ಶಾಖೆಯನ್ನು ಪ್ರಾರಂಭಿಸಲು ಹಿಂದಿನ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದಿರಬೇಕು. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಅನುಮತಿ ಪಡೆದ ಶಾಖೆಗಳನ್ನು ಆರಂಭ ಮಾಡಬೇಕು. ಒಂದು ವೇಳೆ, ಕಾರ್ಯಾರಂಭ ಮಾಡಲು ವಿಳಂಬವಾದಲ್ಲಿ, ಕಾರ್ಯಾರಂಭ ಮಾಡದ ಶಾಖೆಗಳ ಕುರಿತು, 30 ದಿನಗಳೊಳಗೆ, ಮತ್ತೊಮ್ಮೆ ಸಂಯುಕ್ತ ಸಹಕಾರಿಯಿಂದ ಅನುಮತಿ ಪಡೆದುಕೊಳ್ಳತಕ್ಕದ್ದು.
10. ಸಂಯುಕ್ತ ಸಹಕಾರಿಯಿಂದ ಅನುಮತಿಯ ನಂತರ ಶಾಖೆಯ ಆರಂಭಕ್ಕೂ ಪೂರ್ವದಲ್ಲಿ ಅಥವಾ ಆರಂಭದ ನಂತರ ಶಾಖೆಯನ್ನು ಸ್ಥಳಾಂತರ ಮಾಡುವುದಿದ್ದಲ್ಲಿ ಆ ಕುರಿತು ಆಡಳಿತ ಮಂಡಲಿಯಲ್ಲಿ ನಿರ್ಣಯಿಸಿ, ಸಂಯುಕ್ತ ಸಹಕಾರಿಗೆ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಪ್ರಸ್ತಾವನೆಯ ಜೊತೆ, ಮಂಡಲಿಯ ನಿರ್ಣಯದ ಪ್ರತಿ, ಸ್ಥಳಾಂತರಕ್ಕೆ ಕಾರಣ, ಪ್ರಸ್ತಾವಿತ ನೂತನ ಸ್ಥಳದ ವಿವರ, ಶಾಖಾ ಅನುಮತಿ ಪತ್ರ ಮತ್ತು ಪ್ರಮಾಣಪತ್ರ ಇವುಗಳನ್ನು ಸಲ್ಲಿಸತಕ್ಕದ್ದು. ಸಂಯುಕ್ತ ಸಹಕಾರಿಯ ಲಿಖಿತ ಅನುಮೋದನೆಯ ನಂತರ ಸ್ಥಳಾಂತರ ಮಾಡಬಹುದು.
11. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ -
    1. ಶಾಖಾ ವಿಲೀನ ಹಾಗೂ ಮುಚ್ಚುವಿಕೆಯ ಸ್ಥಿತಿ ಉದ್ಭವವಾದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.
    2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.
    3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೇ ಹಿಂತಿರುಗಿಸತಕ್ಕದ್ದು.
    4. ಶಾಖೆ ವಿಲೀನ/ ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಲಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಧೃಢೀಕರಿಸಿ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.

2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ.(ಸಾಮಾನ್ಯ, ಸಹ, ನಾಮಮಾತ್ರ, ಒಟ್ಟು)

3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ-ಜವಾಬ್ದಾರಿ ತಃಖ್ತೆ, ಲಾಭ-ಹಾನಿ ತಃಖ್ತೆ ಮತ್ತು ಜಮಾ-ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ). (ಲೆಕ್ಕಪರಿಶೋಧಕರ ಸಹಿ ಇರುವ ಪ್ರತಿಗಳ ದೃಢೀಕೃತ ಯಥಾನಕಲು)

4. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಭೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.

   ಸಾಮಾನ್ಯ ಸಭೆಯ ಕೈಬರಹದ ನಡಾವಳಿಯ ಸಂಪೂರ್ಣ ಭಾಗದ ಯಥಾ ನಕಲನ್ನು ಧೃಢೀಕರಿಸಿ ಸಲ್ಲಿಸುವುದು. (ಉಧೃತ ಭಾಗವಲ್ಲ)

5. ಸಹಕಾರಿಯ ಕಾರ್ಯವ್ಯಾಪ್ತಿಯ ಕುರಿತಾದ ದಾಖಲೆ. (ಸಹಕಾರಿಯ ಉಪವಿಧಿಯಲ್ಲಿ ಕಾರ್ಯವ್ಯಾಪ್ತಿಯ ಮಾಹಿತಿ ಹೊಂದಿರುವ ಪ್ರತಿಯ ಯಥಾ ನಕಲನ್ನು ಮಾತ್ರ ಲಗತ್ತಿಸಿ)

7. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣದ ವಿವರ. (ಸಹಕಾರಿಯ ಲೆಕ್ಕಪರಿಶೋಧನಾ ವರದಿಯಲ್ಲಿ ಸುಸ್ತಿ ಸಾಲದ ವಿವರದ ಯಥಾ ನಕಲು)

9. ಯಾವುದೇ ರೀತಿಯ ವಿಚಾರಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ವಿಚಾರಣೆ ಮುಕ್ತಾಯವಾಗಿದ್ದು, ವರದಿ ಸಲ್ಲಿಸಿದ್ದಲ್ಲಿ ವರದಿಯ ಪ್ರತಿ. ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.

10. ಯಾವುದೇ ರೀತಿಯ ಪರಿವೀಕ್ಷಣೆ ನಡೆದಿದ್ದಲ್ಲಿ/ನಡೆಯುತ್ತಿದ್ದಲ್ಲಿ ಆದೇಶ ಪತ್ರ, ಅನುಪಾಲನೆ ಸಲ್ಲಿಸಿದ್ದಲ್ಲಿ ಈ ಕುರಿತಾದ ವಿವರಗಳ ಯಥಾ ನಕಲು.

11. ಈಗಿರುವ ಒಟ್ಟು ಶಾಖೆಗಳ ವಿವರ - ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 01.04.2026 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/-

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ